ಮತ್ತು ಉತ್ತಮ ಬುಕ್ಸ್ ಬಂದು ಆಟ್‌ಮಾಸ್‌ಫಿಯರ್ ಚೇಂಜ್ ಆಗಿರುವುದರಿಂದ ಈ ರೀತಿ ಆಗಿದೆ. Normally, whenver there is a revaluation done, 10 to 15% grace is allowed.

ಆ ಕಾರಣದಿಂದ ಫಲಿತಾಂಶಗಳು ಹೆಚ್ಚಿಲ್ಲದಿರಬಹುದು. ಆ ಕಾರಣ we have been able to maintain the sanctity of examination. We are prepared for total revaluation. ರೀ ವಾಲ್ಯುಯೇಷನ್ ಅನ್ನು ನಾವು ಮಾಡಿಸಿದಾಗ ಉತ್ತರಗಳ ಗುಣವಂಟ್ಟಕ್ಕೂ ನೀಡಲಾಗಿರುವ ಅಂಕಗಳಿಗೂ ಮೆಜಾರಿಟಿ ಪೇಪರ್‌ಗಳಲ್ಲಿ ಸಾಮ್ಯವಿರುವುದು ಕಂಡು ಬಂದಿದೆ. ಆದ್ದರಿಂದ ೮೦ ಪರ್ಸೆಂಟ್ ರಿಸಲ್ಟ್ ಇದ್ದದ್ದು ೪೦ ಪರ್ಸೆಂಟಿಗೆಯಲಂ ಪ್ರೈಮಾಫೇಸಿ ಮೇಲಿನ ಕಾರಣದಿಂದ ಒಪ್ಪಿಕೊಂಡರೂ ಬಿಕಾಂ ಪರೀಕ್ಷೆಗಳ ೬೦೦ ಪೇಪರ್‌ಗಳನ್ನು ರೀವ್ಯಾಲ್ಯೂಯೇಷನ್ ಮಾಡಿದ ಮೇಲೆ ೫೦ರಲ್ಲಿ ಹೆಚ್ಚು ಕಡಿಮೆ ನಡೆದಿದೆ ಎಂದು ಕಂಡುಬಂದ ಮೇಲೆ ವಿದ್ಯಾರ್ಥಿಗಳು ಹೇಳುವುದರಲ್ಲಿ ಉತ್ಪ್ರೇಕ್ಷೆ ಇವೆಯೆಂದು ಕಂಡುಬಂತಂ. ಜೊತೆಗೆ ಉಪಕುಲಪತಿಗಳು ಹೊಸದಾಗಿ ಬಂದು ವಿದ್ಯಾ ಕ್ಷೇತ್ರದಲ್ಲಿ ಇದ್ದ ತಪ್ಪುಗಳನ್ನು ತಿದ್ದುತ್ತಿರುವುದರಿಂದ ಮತ್ತು ಮಾಲ್ ಪ್ರಾಕ್ಟೀಸನ್ನು ಆದಷ್ಟೂ ಹಿಡಿತದಲ್ಲಿಟ್ಟಿರುವುದರಿಂದ ಫಲಿತಾಂಶದಲ್ಲಿ ಕುಸಿತವಾಗಿದೆ. ಇದರ ಜೊತೆಗೆ ಇಲ್ಲಿ ಮಾತನಾಡಿದ ಸದಸ್ಯರ ಸಲಹೆಗಳನ್ನೂ ನಾನು ಪರಿಶೀಲನೆಗೆ ತೆಗೆದುಕೊಂಡಿದ್ದೇನೆ. ಒಂದು ವೇಳೆ ತಪ್ಪು ನಡೆದಿದ್ದರೆ ತಪ್ಪಿತಸ್ಥ ಯಾವುದೇ ವ್ಯಕ್ತಿ ಇರಲಿ ಖಂಡಿತ ಅವರನ್ನು ಶಿಕ್ಷೆಗೊಳಪಡಿಸುತ್ತೇವೆ.

ಪ್ರಕಟಣೆ

ಅಧ್ಯಕ್ಷರು.—ಈಗ ಪ್ರಕಟಣೆ. ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.—

"ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಂ ೧೧೪ರ ಮೇರೆಗೆ ವಿಧಾನಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕವನ್ನು ಕರ್ನಾಟಕ ವಿಧಾನಪರಿಷತ್ತಿನಲ್ಲಿ ದಿನಾಂಕ ೧೧–೯–೮೭ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

ಕರ್ನಾಟಕ ಧನ ವಿನಿಯೋಗ ವಿಧೇಯಕ (ಸಂಖ್ಯೆ ೩) ೧೯೮೭"

ಅಧ್ಯಕ್ಷರು —ಈಗ ಸಾರ್ವಜನಿಕರ ಮಹತ್ವದ ಜರೂರು ವಿಷಯಗಳ ಮೇಲೆ ಅಲ್ಪಕಾಲಾವಧಿ ಚರ್ಚೆ. ೭ ಜನ ಭಾಷಣಕಾರರಿದ್ದಾರೆ ಪ್ರತಿಯೊಬ್ಬರಿಗೆ ೧೦ ಮಿನಿಟ್ಸ್, ಹಿಡಿದರೂ ೭೦ ಮಿನಿಟ್ ಆಗಿ ಬೇಗ ಮುಗಿಸಬಹುದು. ಜಾಸ್ತಿ ಅಂದರೆ ೧೫ ನಿಮಿಷಕ್ಕಿಂತ ಹೆಚ್ಚು ಯಾರಿಗೆ ಕೊಡಲು ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ೧೫ ನಿಮಿಷದಲ್ಲಿ ಮುಗಿಸುವ ವಿಷಯವಲ್ಲ ಇದು.

ಅಧ್ಯಕ್ಷರು.—ಆಯಿತು, ನೀವು ಶುರು ಮಾಡಿ.

ಶ್ರೀ ಗಂಗಣ್ಣ (ಕಳ್ಳಂಬೆಳ್ಳ) —ಸ್ವಾಮಿ, ನಾನು ಕಳುಹಿಸಿದ ಒಂದು ವಿಷಯ ಕಳೆದ ಐದು ದಿವಸ ದಿಂದ ನಾಳೆ ನಾಳೆ ಅಂದುಕೊಂಡೇ ಮುಂದೆ ಹೋಗುತ್ತಿದೆ. ನನಗೆ ಅದನ್ನು ಪ್ರಸ್ತಾಪಿಸಲು ಈಗ ಅವಕಾಶ ಕೊಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ನನ್ನದೂ ಅಷ್ಟೆ, ನಾನು ನೋಟಿಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನೋಡ್ರಿ, ನಾನು ಕರೆದಾಗ ನೀವು ಇರಬೇಕು, ಆದರೆ ನೀವಿರಲಿಲ್ಲ. ಈಗ ಆಲ್ಲಿಂದ ಕೂಗಿಕೊಂಡರೆ ಉಪಯೋಗ ಇಲ್ಲ.

ಶ್ರೀ ಗಂಗಣ್ಣ.—ಸ್ವಾಮಿ ಇವತ್ತು ನನಗೆ ಅವಕಾಶ ಕೊಡದಿದ್ದರೆ ನಾನು ಧರಣಿ ಕೂರಬೇಕಾಗುತ್ತದೆ.